ಸಂಖ್ಯೆ: 452 /ಜೇಷ್ಠತಾಪಟ್ಟಿ/2024.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಕೊಪ್ಪಳ, ದಿನಾಂಕ: .02.2024.
ದೂರವಾಣಿ 08539 221900
ಮಿಂಚಂಚೆ : prldj.koppal@gmail.com

**ದಿನಾಂಕ: 01-01-2024 ಕ್ಕೆ ಇದ್ದಂತೆ ಕೊಪ್ಪಳ ಜಿಲ್ಲೆಯ ನ್ಯಾಯಾಂಗ ಇಲಾಖೆಯ ಸಿಬ್ಬಂದಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿದಾಗ ಬಂದ ತಕರಾರು ಹಾಗೂ ಉತ್ತರ/ಮರುತಕರಾರುಗಳ ಬಗ್ಗೆ ಆದೇಶ**

ವಿಷಯ: ದಿನಾಂಕ: 01-01-2024 ಕ್ಕೆ ಇದ್ದಂತೆ ಕೊಪ್ಪಳ ಜಿಲ್ಲೆಯ ನ್ಯಾಯಾಂಗ ಇಲಾಖೆಯ ಸಿಬ್ಬಂದಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿದಾಗ ಬಂದ ತಕರಾರು ಹಾಗೂ ಉತ್ತರ/ಮರುತಕರಾರುಗಳ ಬಗ್ಗೆ ಆದೇಶ.

ಉಲ್ಲೇಖ: 1.ಈ ನ್ಯಾಯಾಲಯದ ಪತ್ರ ಸಂಖ್ಯೆ. 99/ಜೇಷ್ಠತಾ ಪಟ್ಟಿ/2024 ದಿನಾಂಕ: 11.01.2024.
2. ಈ ನ್ಯಾಯಾಲಯದ ಪತ್ರ ಸಂಖ್ಯೆ. 248/ಜೇಷ್ಠತಾ ಪಟ್ಟಿ/2024 ದಿನಾಂಕ: 29.01.2024.

***

ದಿನಾಂಕ: 01-01-2024 ಕ್ಕೆ ಇದ್ದಂತೆ ಕೊಪ್ಪಳ ಜಿಲ್ಲೆಯ ನ್ಯಾಯಾಂಗ ಇಲಾಖೆಯ ಸಿಬ್ಬಂದಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ 1 ರ ಪತ್ರದ ಮೂಲಕ ಪ್ರಕಟಿಸಿದ್ದು, ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಕೆಲವು ಸಿಬ್ಬಂದಿಗಳು ತಮ್ಮ ತಕರಾರುಗಳು/ ಮನವಿಗಳು/ ಸಲಹೆಗಳನ್ನು ಸಲ್ಲಿಸಿರುತ್ತಾರೆ. ಉಲ್ಲೇಖ 2 ರ ಪತ್ರದ ಸೂಚನೆಯಂತೆ ಅವುಗಳಿಗೆ ಸಂಬಂಧಪಟ್ಟ ಸಿಬ್ಬಂದಿಗಳು ತಮ್ಮ ಉತ್ತರ/ ಮರುತಕರಾರು ಸಲ್ಲಿಸಿರುತ್ತಾರೆ. ಇವುಗಳನ್ನು ಪರಿಗಣಿಸಿ ಈ ಕೆಳಗಿನಂತೆ ಆದೇಶಿಸಿದೆ.

| ಕ್ರಮ ಸಂಖ್ಯೆ. | ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ತಕರಾರುಗಳು /ಮನವಿಗಳು / ಸಲಹೆ/ಉತ್ತರ/ ಮರುತಕರಾರುಗಳ ವಿವರ | ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ತಕರಾರು/ ಮನವಿ/ ಸಲಹೆಗಳ/ ಉತ್ತರ/ ಮರುತಕರಾರುಗಳ ಬಗ್ಗೆ ಆದೇಶ |
|---|---|---|
| 1. | ಶ್ರೀ. ಬಸಪ್ಪ ದಂಡಿನ, ದ್ವಿ.ದ.ಸ, ಶ್ರೀಮತಿ ದಾಕ್ಷಾಯಣಿ ನಕಲು ಬೆರಳಚ್ಚುಗಾರರು, ಶ್ರೀ ಮಹಮ್ಮದ್ ರಫೀಕ್, ರಮೇಶ ದೊಡ್ಡ ಮನಿ, ಸವಿತಾ ಉಡಗಿ, ಬೆರಳಚ್ಚುಗಾರರು, ಬಸವರಾಜ, ಪ್ರ.ದ.ಸ. ಇವರು ಪ್ರ.ದ.ಸ ಉಳಿಕೆ ಮೂಲ ವೃಂದದ ಪ್ರ.ದ.ಸ ಹುದ್ದೆಯ ಜೇಷ್ಠತಾ ಪಟ್ಟಿಯ ಕ್ರಮ | ಉಳಿಕೆ ಮೂಲ ವೃಂದದ ಪ್ರ.ದ.ಸ ಹುದ್ದೆಯ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ 7,8 ರ ಸಿಬ್ಬಂದಿಯ ಹೆಸರಿನ ಮುಂದೆ ಷರಾದಲ್ಲಿ ಸ್ಪಷ್ಟವಾಗಿ "ಸ್ಥಳೀಯ ವೃಂದದ ಸಿಬ್ಬಂದಿಗಳು ಅಂತರ ಜಿಲ್ಲಾ ವರ್ಗಾವಣೆಯಾಗಿ ಬಂದಿದ್ದರಿಂದ ಮುಂದಿನ ನೇರ ನೇಮಕಾತಿಯಲ್ಲಿ ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 43 ಹೆಚ್.ಕೆ.2013, ದಿನಾಂಕ: 29-01-2014 ರ ಕಂಡಿಕೆ 9 ರ ಪ್ರಕಾರ ಸರಿದೂಗಿಸಲಾಗುವುದು." ಎಂದು ತೋರಿಸಿದ್ದರೂ ಸಹ ಈ ತಕರಾರುಗಳನ್ನು ಸಲ್ಲಿಸಿದ್ದು ಪ್ರಶ್ನಿತ ಸಿಬ್ಬಂದಿಗಳು ತಮ್ಮ ಮುಂಬಡ್ತಿಗೆ ಅಡ್ಡ ಬರುವರೆಂದು ಭಾವಿಸಿರುತ್ತಾರೆ. ಆದರೆ ನಿಯಮಾನುಸಾರ ಸ್ಥಳೀಯ ಹಾಗೂ ಉಳಿಕೆ ಮೂಲ ವೃಂದದ ಹುದ್ದೆಗಳನ್ನು ಮುಂಬಡ್ತಿಯಿಂದ ಭರ್ತಿ |

| | | |
|---|---|---|
| | ಸಂಖ್ಯೆ 7,8 ರ ಸಿಬ್ಬಂದಿಯ ಬಗ್ಗೆ ತಮ್ಮ ತಕರಾರು ಸಲ್ಲಿಸಿರುತ್ತಾರೆ. | ಮಾಡುವಾಗ ಆಯಾ ವೃಂದದ ಕೆಳಹಂತದ ಸಿಬ್ಬಂದಿಗಳಿಂದಲೇ ಭರ್ತಿಮಾಡಲಾಗುವುದು. ಷರಾದಲ್ಲಿ ತೋರಿಸಿದಂತೆ ಕೇವಲ ಮಂಜೂರಾದ ಹಾಗೂ ವೃಂದ ವಿಭಜನೆಯಂತೆ ಸರಿತೂಗಿಸಲು ಕ್ರಮ ಸಂಖ್ಯೆ 7,8 ರ ಸಿಬ್ಬಂದಿಯ ಹೆಸರುಗಳನ್ನು ಅವರ ವೃಂದಕ್ಕೆ ನಿಗದಿಪಡಿಸಿದೆ. |
| 2. | ಶ್ರೀ ಮನೋಹರ, ಶ್ರೀ ತಿಪ್ಪಣ್ಣ, ವಿ.ಎಸ್.ಹೆಬ್ಬಾಳ ಪ್ರ.ದ.ಸ., ಶ್ರೀ ತನ್ವೀರ್ ಅಹಮ್ಮದ್,ಶ್ರೀಮತಿ ಶಾಮಾಲಾ, ಶಿರಸ್ತೇದಾರರು ಇವರು ಉಳಿಕೆ ಮೂಲ ವೃಂದದ ಶಿರಸ್ತೇದಾರರ ಕ್ರಮ ಸಂಖ್ಯೆ: 03 ರ ಹಾಗೂ ಹಿರಿಯ ಶಿರಸ್ತೇದಾರರ ಹುದ್ದೆಗೆ ಉಳಿಕೆ ಮೂಲ ವೃಂದದವರನ್ನು ಪರಿಗಣಿಸದಿರುವ ಬಗ್ಗೆ ತಮ್ಮ ಮನವಿ /ತಕರಾರು ಹಾಗೂ ಮರು ತಕರಾರುಗಳನ್ನು ಸಲ್ಲಿಸಿರುತ್ತಾರೆ. | ಈ ಸಿಬ್ಬಂದಿಗಳ ಮನವಿ /ತಕರಾರು ಹಾಗೂ ಮರು ತಕರಾರುಗಳನ್ನು ಒಂದೇ ಅಂಶಕ್ಕೆ ಸಂಬಂಧಪಟ್ಟದ್ದಾರಿಂದ ಅವುಗಳನ್ನು ಒಟ್ಟಾಗಿ ಈ ಕೆಳಗಿನಂತೆ ಪರಿಗಣಿಸಿದೆ.<br>ಉಳಿಕೆ ಮೂಲ ವೃಂದಕ್ಕೆ ಸೇರಿದ್ದ ಶ್ರೀ ಪ್ರಕಾಶ ಗಡಾದ, ಶಿರಸ್ತೇದಾರರು ಅಂತರ ಜಿಲ್ಲಾ ಪರಸ್ಪರ ವರ್ಗಾವಣೆ ಹೊಂದಿ ಅವರ ಜಾಗಕ್ಕೆ ಸ್ಥಳೀಯ ವೃಂದಕ್ಕೆ ಸೇರಿದ ಶ್ರೀ ತನ್ವೀರ್ ಅಹಮ್ಮದ್ ಶಿರಸ್ತೇದಾರರು ಕೊಪ್ಪಳ ಜಿಲ್ಲೆಗೆ ಬಂದಿರುತ್ತಾರೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದ ಸಂಖ್ಯೆ:ಎಲ್‌ಸಿಎ-**II**.ಡಿಜೆಎ-**II**/ವರ್ಗಾವಣೆ **/2019-2020,** ದಿನಾಂಕ: **08-02-2021** ರ ಪ್ರಕಾರ ಉಳಿಕೆ ಮೂಲ ವೃಂದದ ಒಂದು ಶಿರಸ್ತೇದಾರರ ಹುದ್ದೆಯನ್ನು ಸ್ಥಳೀಯ ವೃಂದಕ್ಕೆ ಸೇರಿದ ಶಿರಸ್ತೇದಾರರು ವಹಿಸಿಕೊಂಡಿದ್ದಾರೆ. ಈ ಒಂದು ವಿಷಯದ ಬಗ್ಗೆ ಕಳೆದ ಮೂರು ವರ್ಷಗಳ ಜೇಷ್ಠತಾ ಪಟ್ಟಿಯಲ್ಲಿ ನಮೂದಿದ್ದರೂ ಸಹ ಆಗ ಯಾವುದೇ ತಕರಾರನ್ನು ಸಲ್ಲಿಸದೆ ಈಗ ಇದರ ಬಗ್ಗೆ ತಮ್ಮ ತಕರಾರನ್ನು ಸಲ್ಲಿಸಿರುತ್ತಾರೆ.<br>**24** ಶಿರಸ್ತೇದಾರರ ಹುದ್ದೆಯಿಂದ **10** ಹುದ್ದೆಗಳು ಹಿರಿಯ ಶಿರಸ್ತೇದಾರರು/ಬೆಂಚ್ ಕ್ಲರ್ಕ ಗ್ರೇಡ್**-01** ಎಂದು ಮೇಲ್ದರ್ಜೆಗೊಂಡಾಗ ಶಿರಸ್ತೇದಾರರ ಹುದ್ದೆಗಳು 14 ಉಳಿಯುತ್ತವೆ.<br>ಅವುಗಳಲ್ಲಿ ಪ್ರತಿಶತ 80 ಸ್ಥಳೀಯ ವೃಂದಕ್ಕೆ ಅಂದರೆ 12 ಹುದ್ದೆಗಳು ಹಾಗೂ ಉಳಿಕೆ ಮೂಲ ವೃಂದಕ್ಕೆ ಪ್ರತಿಶತ 20 ಅಂದರೆ 02 ಹುದ್ದೆಗಳು ನಿಗದಿಯಾಗುತ್ತದೆ. ಪ್ರಸ್ತುತ ಉಳಿಕೆ ಮೂಲ ವೃಂದದ ಶಿರಸ್ತೇದಾರರ ಜೇಷ್ಠತಾ ಪಟ್ಟಿಯಲ್ಲಿ ಈಗಾಗಲೇ 03 ಸಿಬ್ಬಂದಿಗಳು ಅಂದರೆ ಶ್ರೀಮತಿ ಕೆ.ಎಸ್. ಶಾಮಲಾ, ಶ್ರೀ ನಾಗನಗೌಡ, ಶ್ರೀಮತಿ ದ್ರೌಪತಿ, ಶಿರಸ್ತೇದಾರರು ಇರುತ್ತಾರೆ. ಆದ್ದರಿಂದ ಈ ವೃಂದದಲ್ಲಿ ಸದ್ಯ ಖಾಲಿ ಹುದ್ದೆಗಳು ಇರುವುದಿಲ್ಲ.<br>ಅದರಂತೆ **10** ಹುದ್ದೆಗಳು ಹಿರಿಯ ಶಿರಸ್ತೇದಾರರು/ಬೆಂಚ್ ಕ್ಲರ್ಕ ಗ್ರೇಡ್**-01** ಎಂದು ಮೇಲ್ದರ್ಜೆಗೊಂಡಾಗ ಅವುಗಳಲ್ಲಿ ಪ್ರತಿಶತ 80 ಸ್ಥಳೀಯ ವೃಂದಕ್ಕೆ ಅಂದರೆ 08 ಹುದ್ದೆಗಳು ಹಾಗೂ ಉಳಿಕೆ ಮೂಲ ವೃಂದಕ್ಕೆ ಪ್ರತಿಶತ 20 ಅಂದರೆ 02 ಹುದ್ದೆಗಳು ನಿಗದಿಪಡಿಸಬೇಕಾಗಿತ್ತು. ಆದರೆ ಈ ನ್ಯಾಯಾಲಯದ ಅಧಿಸೂಚನೆ ದಿನಾಂಕ:28-03-2022 ರ ಪ್ರಕಾರ ಉಳಿಕೆ ಮೂಲ ವೃಂದದವರಿಗೆ 02 ಹುದ್ದೆಗಳನ್ನು ನಿಯಮಾನುಸಾರ |

| | | |
|---|---|---|
| | | ನಿಗದಿಪಡಿಸಿರುವುದಿಲ್ಲ. ಪ್ರಸ್ತುತ ಹಿರಿಯ ಶಿರಸ್ತೇದಾರರು/ ಬೆಂಚ್ ಕ್ಲರ್ಕ ಗ್ರೇಡ್-01 ಹುದ್ದೆಗಳಲ್ಲಿ ಉಳಿಕೆ ಮೂಲ ವೃಂದದ ಸಿಬ್ಬಂದಿಗಳು ಯಾರು ಇರದ ಕಾರಣ ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 43 ಹೆಚ್.ಕೆ.2013, ದಿನಾಂಕ: 29-01-2014 ರ ಕಂಡಿಕೆ 9 ರ ಪ್ರಕಾರ ಮುಂದಿನ ಮುಂಬಡ್ತಿ ಪ್ರಕ್ರಿಯೆಗಳಲ್ಲಿ ಸರಿದೂಗಿಸಲಾಗುವುದು. |
| 3. | ಶ್ರೀಮತಿ ಜಗದೇವಿ, ಶ್ರೀ ಮಂಜುನಾಥ , ಶ್ರೀ ಚಂದ್ರಶೇಖರ, ಪ್ರ.ದ.ಸ. ರವರು ಸ್ಥಳೀಯ ವೃಂದದ ಪ್ರ.ದ.ಸ. ಹುದ್ದೆಯ ಕ್ರ. ಸಂಖ್ಯೆ 10 ರಿಂದ 14 ರ ಸಿಬ್ಬಂದಿಗಳ ಜೇಷ್ಠತೆಯ ಬಗ್ಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತಾರೆ. | ಸರ್ವೋಚ್ಚ ನ್ಯಾಯಾಲಯದ ಬಿ.ಕೆ ಪವಿತ್ರ ಪ್ರಕರಣದ ನಿರ್ದೇಶನಗಳ ಪ್ರಕಾರ ಈ ನ್ಯಾಯಾಲಯದ ಆದೇಶ ಸಂಖ್ಯೆ 13,15/ ಆಡಳಿತ /2018 ದಿನಾಂಕ: 20.02.2018 ರ ಪ್ರಕಾರ ಪರಿಗಣಿಸಲಾದ ದಿನಾಂಕದೊಂದಿಗೆ ಮುಂಬಡ್ತಿಗಳನ್ನು ನೀಡಲಾಗಿರುತ್ತದೆ. ಅದರ ಪ್ರಕಾರ ಈ ಹಿಂದಿನ ಜೇಷ್ಠತಾ ಪಟ್ಟಿಗಳಲ್ಲಿ ಪ್ರ.ದ.ಸ ಹುದ್ದೆಗೆ ಪರಿಗಣಿಸಲಾದ ದಿನಾಂಕದ ಮೇರೆಗೆ ಜೇಷ್ಠತಾ ಪಟ್ಟಿಗಳನ್ನು ಅಂತಿಮ ಗೋಳಿಸಲಾಗಿರುತ್ತದೆ. |
| 4. | ಶ್ರೀಮತಿ ಜಲಾಜಾಕ್ಷೀ, ಶ್ರೀ ಬಿ ಸುರೇಶ, ಬೆರಳಚ್ಚುಗಾರರು ಇವರು ಹತ್ತು ವರ್ಷಗಳಿಗಿಂತಾ ಹೆಚ್ಚಾಗಿ ಸೇವೆ ಸಲ್ಲಿಸಿದ್ದು ಅಂತರ ಜಿಲ್ಲಾ ವರ್ಗಾವಣೆ ಗೊಂಡ ಸಿಬ್ಬಂದಿಗಳನ್ನು ನೇರ ನೇಮಕಾತಿ ಹುದ್ದೆಗಳಲ್ಲಿ ಪರಿಗಣಿಸದೆ ಅವರನ್ನು ಮುಂಬಡ್ತಿ ಹುದ್ದೆಗೆ ಪರಿಗಣಿಸಿರುವುದರಿಂದ ಅವರು ಬಡ್ತಿಯಿಂದ ವಂಚಿತರಾಗಿದ್ದಾರೆ ಹಾಗೂ ನೇರ ನೇಮಕಾತಿ ಮತ್ತು ಮುಂಬಡ್ತಿಗಳ ಅನುಪಾತವನ್ನು ನಿಯಮಾನುಸಾರ ಪಾಲಿಸಲು ವಿನಂತಿಸಿರುತ್ತಾರೆ.<br>ಶ್ರೀಮತಿ ಗಾಯತ್ರಿ ಹೆ.ಚ್.ಬಿ ಹಾಗೂ ತನ್ವೀರ ಅಹಮ್ಮದ ರವರು ಶೀರಸ್ತೆದಾರರು ಗೌರವಾನ್ವಿತ ಕರ್ನಾಟಕ ಉಚ್ಚನಾಯಲಯ ಬೆಂಗಳೂರುರವರ ಆದೇಶಗಳ ಮೇರೆಗೆ ಅಂತರ ಜಿಲ್ಲಾ ವರ್ಗಾವಣೆಯಾಗಿದ್ದು ಈ ಆದೇಶಗಳಲ್ಲಿ ವರ್ಗಾವಣೆ ಹೊಂದಿದ ಜಿಲ್ಲೆಗಳಲ್ಲಿ ಅವರ ಜೇಷ್ಠತೆಯನ್ನು ಉಳಿಸಿಕೊಳ್ಳುವಂತೆ | ಶ್ರೀಮತಿ ಗಾಯತ್ರಿ ಹೆ.ಚ್.ಬಿ ಹಾಗೂ ತನ್ವೀರ ಅಹಮ್ಮದ ರವರು ಶೀರಸ್ತೆದಾರರು ಗೌರವಾನ್ವಿತ ಕರ್ನಾಟಕ ಉಚ್ಚನಾ ಯಲಯ ಬೆಂಗಳೂರುರವರ ಆದೇಶಗಳ ಸಂಖ್ಯೆ:ಎಲ್.ಸಿ.ಎ 2 ಟ್ರಾನ್ಸ್‌ಫರ್2018 ದಿನಾಂಕ:31.12.2018 ಹಾಗೂ ಆದೇಶಗಳ ಸಂಖ್ಯೆ: ಸಂಖ್ಯೆ:ಎಲ್.ಸಿ.ಎ 2 ಟ್ರಾನ್ಸ್‌ಫರ್ 2019, 2020 ದಿನಾಂಕ:08.02.2021 ಮೇರೆಗೆ ಅಂತರ ಜಿಲ್ಲಾ ವರ್ಗಾವಣೆಯಾಗಿದ್ದು ಈ ಆದೇಶಗಳಲ್ಲಿ ವರ್ಗಾವಣೆ ಹೊಂದಿದ ಜಿಲ್ಲೆಗಳಲ್ಲಿ ಅವರ ಜೇಷ್ಠತೆಯನ್ನು ಉಳಿಸಿಕೊಳ್ಳುವಂತೆ ನಿರ್ದೇಶನವಿರುತ್ತದೆ. ಅದರಂತೆ ಜೇಷ್ಠತೆಯನ್ನು ನಿಗದಿಪಡಿಸಲಾಗಿರುತ್ತದೆ.<br>ಈ ನ್ಯಾಯಾಲಯದ ಪತ್ರದ ಸಂಖ್ಯೆ 3312/ಆಡಳಿತ/2022 ದಿನಾಂಕ: 14/11/2022 ರ ಮೂಲಕ ಗೌರವಾನ್ವಿತ ಕರ್ನಾಟಕ ಉಚ್ಚನಾಯಲಯ ಬೆಂಗಳೂರುರವರಲ್ಲಿ ಈ ಹಿಂದೆ ಕೆಲವು ಅಂತರಜಿಲ್ಲಾ ವರ್ಗಾವಣೆಯಾದ ಸಿಬ್ಬಂದಿಗಳನ್ನು ನೇರ ನೇಮಕಾತಿ ಹುದ್ದೆಗಳಲ್ಲಿ ಪರಿಗಣಿಸದೆ ಅವರನ್ನು ಮುಂಬಡ್ತಿ ಹುದ್ದೆಗೆ ಪರಿಗಣಿಸಿರುವುದರಿಂದ ಖಾಲಿ ಹುದ್ದೆಗಳ ತಃಖ್ತೆಗಳಲ್ಲಿ ತಿದ್ದುಪಡಿಗಾಗಿ ಅನುಮತಿಯನ್ನು ಕೋರಲಾಗಿತ್ತು. ಆದರೆ ಮುಂಬರುವ ನೇರನೇಮಕಾತಿ ಹಾಗೂ ಮುಂಬಡ್ತಿಗಳಲ್ಲಿ ಸರಿಪಡಿಸಲು ತಿಳಿಸಿರುತ್ತಾರೆ. ಅದರಂತೆ ಪ್ರಸ್ತುತ ಅಂತರಜಿಲ್ಲಾ ವರ್ಗಾವಣೆಯಾಗಿ ಬಂದ ಸಿಬ್ಬಂದಿಗಳನ್ನು ಕೇವಲ ನೇರ ನೇಮಕಾತಿ ಅಡಿಯಲ್ಲಿಯೆ ತೆಗೆದುಕೊಳ್ಳಲಾಗಿದೆ ಎಂದು ಈ ಮೂಲಕ ತಿಳಿಸಲಾಗಿರುತ್ತದೆ. |

| | | |
|---|---|---|
| | ನಿರ್ದೇಶನವಿರುತ್ತದೆ. ಅದರಂತೆ ತಮ್ಮ ಹೆಸರು ಜೇಷ್ಠತಾ ಪಟ್ಟಿಯಲ್ಲಿ ಸರಿ ಇರುತ್ತದೆ ಎಂದು ತಿಳಿಸಿರುತ್ತಾರೆ. | |
| 5. | ಶ್ರೀಸಿದ್ದೇಶ ಪಾಟೀಲ, ಶ್ರೀಮತಿ ರೇಣುಕಾ ಸೊನ್ನದ್ ಜಾರಿಕಾರರು ಇವರು ಅಂಗವಿಕಲರಾಗಿದ್ದು ಆ ರೀತಿ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಲು ವಿನಂತಿಸಿರುತ್ತಾರೆ. | ಶ್ರೀಸಿದ್ದೇಶ ಪಾಟೀಲ, ಶ್ರೀಮತಿ ರೇಣುಕಾ ಸೊನ್ನದ್ ಜಾರಿಕಾರರು ಇವರು ಹೆಸರಿನ ಮುಂದೆ ಅಂಗವಿಕಲ ಎಂದು ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಲು ಆದೇಶಿಸಿದೆ. |
| 6. | ಶ್ರೀಮತಿ ವಿಶಾಲಾಕ್ಷೀ ಬೆಲೀಫ್ ಇವರು ತಮ್ಮ ಜನ್ಮ ದಿನಾಂಕ ಹಾಗೂ ಇತರೆ ವಿವರಗಳು ತಪ್ಪಾಗಿ ನಮೂದಾಗಿರುತ್ತವೆ ಎಂದು ತಿಳಿಸಿರುತ್ತಾರೆ. ಅವುಗಳನ್ನು ಸರಿಪಡಿಸಲು ತಿಳಿಸಿರುತ್ತಾರೆ. | ಶ್ರೀಮತಿ ವಿಶಾಲಾಕ್ಷೀ ಬೆಲೀಫ್ ಇವರ ವಿವರಗಳು ಸ್ಥಳೀಯ ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸರಿಯಾಗಿ ನಮೂದಾಗಿರುತ್ತವೆ. ಆದರಂತೆ ಜಂಟಿ ಜೇಷ್ಠತಾ ಪಟ್ಟಿಯಲ್ಲಿ ಅವರ ವಿವರಗಳನ್ನು ಸರಿಪಡಿಸಲು ಆದೇಶಿಸಿದೆ. |
| 7. | ಶ್ರೀ ಮಾನಪ್ಪ ರಾಠೋಡ ಪ್ರ.ದ.ಸ ರವರು ತಮ್ಮ ಪದೋನ್ನತಿ ದಿನಾಂಕವನ್ನು ದಿನಾಂಕಃ01.01.2016 ರ ಬದಲಾಗಿ ದಿನಾಂಕಃ20.12.2015 ಎಂದು ನಮೂದು ಮಾಡಲು ಆದೇಶದ ಪ್ರತಿಯೊಂದಿಗೆ ವಿನಂತಿಸಿರುತ್ತಾರೆ. | ಶ್ರೀ ಮಾನಪ್ಪ ರಾಠೋಡ ಪ್ರ.ದ.ಸ ರವರ ಪದೋನ್ನತಿ ದಿನಾಂಕವನ್ನು ದಿನಾಂಕಃ01.01.2016 ರ ಬದಲಾಗಿ ದಿನಾಂಕಃ20.12.2015 ಎಂದು ಆದೇಶದ ಸಂಖ್ಯೆಃ 104 ಆಡಳಿತ 2015/22.12.2015 ರ ಪ್ರಕಾರ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಲು ಆದೇಶಿಸಿದೆ. |
| 8. | ಶ್ರೀಮತಿ ಸವಿತಾ ಉಡಗಿ ಬೆರಳಚ್ಚುಗಾರರು ತಮ್ಮ ಹೆಸರಿನ ಮುಂದೆ ಪರಿಶಿಷ್ಟ ಪಂಗಡಕ್ಕೆ ಸೇರಿದವಳೆಂದು ನಮೂದಿಸಲು ವಿನಂತಿಸಿರುತ್ತಾರೆ. | ಈ ನ್ಯಾಯಾಲಯದ ಆದೇಶದ ಸಂಖ್ಯೆಃ17/ ಆಡಳಿತ/2023/ ದಿನಾಂಕಃ22.02.2023 ರ ಪ್ರಕಾರ ಶ್ರೀಮತಿ ಸವಿತಾ ಉಡಗಿ ಬೆರಳಚ್ಚುಗಾರರು ಇವರು ಪರಿಶಿಷ್ಟ ಪಂಗಡಕ್ಕೆ ಸೇರಿದವರೆಂದು ಆದೇಶಿಸಲಾಗಿರುತ್ತದೆ. ಅದರಂತೆ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಲು ಆದೇಶಿಸಿದೆ. |
| 9. | ಶ್ರೀ ಮಂಜುನಾಥ ಹದ್ದಣ್ಣನವರ ದ್ವಿ.ದ.ಸ ರವರು ಅಂತರಜಿಲ್ಲಾ ವರ್ಗಾವಣೆಯಾಗಿ ಬಂದಿದ್ದು ಕೊಪ್ಪಳ ಘಟಕ್ಕೆ ಸೇರಿದ ದಿನಾಂಕವನ್ನು ಪರಿಗಣಿಸಿ ಜೇಷ್ಠತಾ ಪಟ್ಟಿಯಲ್ಲಿ ಅವರ ಹೆಸರನ್ನು ನಿಗದಿಪಡಿಸಲು ವಿನಂತಿಸಿರುತ್ತಾರೆ. | ಶ್ರೀ ಮಂಜುನಾಥ ಹದ್ದಣ್ಣನವರ ದ್ವಿ.ದ.ಸ ರವರು ಅಂತರಜಿಲ್ಲಾ ವರ್ಗಾವಣೆಯಾಗಿ ದಿನಾಂಕಃ 27.12.2022 ರಂದು ಕೊಪ್ಪಳ ಜಿಲ್ಲೆಯಲ್ಲಿ ಸೇರಿರುತ್ತಾರೆ ಅದರಂತೆ ಜೇಷ್ಠತಾ ಪಟ್ಟಿಯಲ್ಲಿ ಅವರ ಹೆಸರನ್ನು ನಿಗದಿಪಡಿಸಲು ಆದೇಶಿಸಿದೆ. |

| | | |
|---|---|---|
| 10 | ಶ್ರೀಮತಿ ಹೇಮಾ ವಡ್ಡರ್ ದ್ವಿ.ದ. ಸ. ರವರು ಜೇಷ್ಠತಾ ಪಟ್ಟಿಯಲ್ಲಿ ಸೇವೆಗೆ ಸೇರಿದ ದಿನಾಂಕವನ್ನು ತಿದ್ದುಪಡಿ ಮಾಡುವಂತೆ ವಿನಂತಿಸಿರುತ್ತಾರೆ. | ಶ್ರೀಮತಿ ಹೇಮಾ ವಡ್ಡರ್ ದ್ವಿ.ದ. ಸ. ರವರು ಸೇವೆಗೆ ಸೇರಿದ ದಿನಾಂಕಃ 05-06-2017 ತಿದ್ದುಪಡಿ ಮಾಡಲು ಆದೇಶಿಸಲಾಗಿರುತ್ತದೆ. ಅದರಂತೆ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಲು ಆದೇಶಿಸಿದೆ. |

ಮೇಲ್ಕಾಣಿಸಿದ ನಿರ್ದೇಶನಗಳಂತೆ ದಿನಾಂಕಃ 01-01-2024 ಕ್ಕೆ ಇದ್ದಂತೆ ಕೊಪ್ಪಳ ಜಿಲ್ಲೆಯ ನ್ಯಾಯಾಂಗ ಇಲಾಖೆಯ ಸಿಬ್ಬಂದಿಗಳ ಅಂತಿಮ ಪಟ್ಟಿಯನ್ನು ಸಿದ್ದಪಡಿಸಲು ಆದೇಶಿಸಿದೆ.

ತಮ್ಮ ವಿಶ್ವಾಸಿ,

20/2/24

(ಚಂದ್ರ ಶೇಖರ ಸಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಪ್ಪಳ.

ಗೆ,

1. ಪ್ರಧಾನ ನ್ಯಾಯಾಧೀಶರು, ಕೌಟುಂಬಿಕ ನ್ಯಾಯಾಲಯ, ಕೊಪ್ಪಳ.
2. ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಎಫ್.ಟಿ.ಎಸ್.ಸಿ.-1, ಪೋಕ್ಸೊ ನ್ಯಾಯಾಲಯ, ಕೊಪ್ಪಳ.
3. 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೊಪ್ಪಳ (ಪೀಠ ಗಂಗಾವತಿ) ಗಂಗಾವತಿ.
4. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು, ಕೊಪ್ಪಳ.
5. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಕೊಪ್ಪಳ.
6. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಯಲಬುರ್ಗಾ/ ಗಂಗಾವತಿ/ ಕುಷ್ಟಗಿ.
7. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕೊಪ್ಪಳ/ ಗಂಗಾವತಿ/ ಕುಷ್ಟಗಿ.
8. ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಯಲಬುರ್ಗಾ.
9. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕೊಪ್ಪಳ/ ಗಂಗಾವತಿ/ ಕುಷ್ಟಗಿ.